1581 (2092) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು,

ಆ) ಇದೇ ಅವಧಿಯಲ್ಲಿ ಸರ್ಕಾರಕ್ಕೆ ಬಂದಿದ್ದ ಪ್ರಸ್ತಾವನೆಗಳೆಷ್ಟು (ಮಂಜೂರಾಗಿರುವ ಶಾಲೆಗಳು ಹಾಗೂ ಪ್ರಸ್ತಾವನೆಯ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),

ಇ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅವಶ್ಯಕತೆ ಇದೆ,

ಈ) ಈ ಬಗ್ಗೆ ಸರ್ಕಾರಕ್ಕೆ ವಿವಿಧ ಜಿಲ್ಲೆಗಳಿಂದ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು),

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ 527
ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ 485

ಆ) 2006–07ನೇ ಸಾಲಿನಲ್ಲಿ 485 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡಿದೆ (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ)

ಇ) ಆಯಾಯ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿನ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದು ಸತತವಾದ ಪ್ರಕ್ರಿಯೆಯಾಗಿದೆ

ಈ) **ಸರ್ಕಾರಿ ಪ್ರಾಥಮಿಕ ಶಾಲೆ**

* 2007–08 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 603 ಹೊಸ ಪ್ರಾಥಮಿಕ ಶಾಲೆಗಳಿಗೆ ಪ್ರಸ್ತಾವನೆಗಳು ಬಂದಿದ್ದು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ)

ಸರ್ಕಾರಿ ಪ್ರೌಢಶಾಲೆ

* 2007–08ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಉ) **ಸರ್ಕಾರಿ ಪ್ರಾಥಮಿಕ ಶಾಲೆ**

* ಔರಾದ್–––––––––17
* ಬಸವಕಲ್ಯಾಣ–––––––10
* ಭಾಲ್ಕಿ––––––––––––09
* ಬೀದರ್––––––––––21
* ಹುಮ್ನಾಬಾದ್––––––22

ಸರ್ಕಾರಿ ಪ್ರೌಢಶಾಲೆ

*	ಹುಮ್ನಾಬಾದ್	–	ಮರಕಲಾ ಮದರಗಾವ್ ಬನೀರಾಪುರ ಸುಲ್ತಾನಾಬಾದ್
*	ಬಸವಕಲ್ಯಾಣ	–	ರಾಮತೀರ್ಥ ಬೋಸಗ ಗಡಿಗೌಡಗಾಂವ್

			ಅಟ್ಟೂರು
*	ಔರಾದ್	–	ಚಿಮ್ಮೆಗಾಂ
*	ಭಾಲ್ಕಿ	–	ಕೆರೂರ
			ಉಚ್ಚಾ
*	ಬೀದರ್	–	ಶಿರಶಿ
			ನಂದಗಾವ್

1582 (2117) ಶ್ರೀ ಹೆಚ್ ಹಾಲಪ್ಪ (ಹೊಸನಗರ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ತುಂಗಾ ಏತ ನೀರಾವರಿ ಯೋಜನೆಯ ಅನುಷ್ಠಾನಕ್ಕೆ ಇರುವ ತೊಂದರೆಗಳೇನು,

ಆ) ತೊಂದರೆಗಳನ್ನು ನಿವಾರಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು,

ಇ) ಯಾವ ಕಾಲ ಮಿತಿಯೊಳಗೆ ಇದನ್ನು ನಿವಾರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ತುಂಗಾ ಏತ ನೀರಾವರಿ ಯೋಜನೆಗೆ ಸುಮಾರು 173 ಎಕರೆ ಅರಣ್ಯ ಪ್ರದೇಶವು ಕಾಲುವೆ ನಿರ್ಮಾಣಕ್ಕಾಗಿ ಬೇಕಾಗಿರುತ್ತದೆ ಇದರ ಬಿಡುಗಡೆಗಾಗಿ ಅರಣ್ಯ ಇಲಾಖೆಯೊಂದಿಗೆ ಕರ್ನಾಟಕ ನೀರಾವರಿ ನಿಗಮವು ಪತ್ರ ವ್ಯವಹಾರವನ್ನು ನಡೆಸಿರುತ್ತದೆ ಅರಣ್ಯ ಭೂಮಿಯ ಬಿಡುಗಡೆಯು ಇದುವರೆವಿಗೂ ಆಗದೇ ಇರುವ ಕಾರಣ, ಈ ಯೋಜನೆಯ ಅನುಷ್ಠಾನವು ಸಾಧ್ಯವಾಗಿರುವುದಿಲ್ಲ ,

ಆ) ಅರಣ್ಯ ಭೂಮಿಯ ಬಿಡುಗಡೆಗಾಗಿ ಅರಣ್ಯ ಇಲಾಖೆಯೊಂದಿಗೆ ಸತತ ಪ್ರಯತ್ನಗಳನ್ನು ಮಾಡಿದ್ದು, ಅದನ್ನು ಮುಂದುವರೆಸಲಾಗಿದೆ

ಇ) ಅರಣ್ಯ ಭೂಮಿಯ ಬಿಡುಗಡೆಯ ನಂತರವೇ ಯೋಜನೆಯ ಅನುಷ್ಠಾನದ ಕಾಲಮಿತಿಯ ಬಗ್ಗೆ ನಿರ್ಧರಿಸಲು ಸಾಧ್ಯವಾಗುವುದು